ಕ್ಷಣದಲ್ಲಾದರೂ ನಾನು ಹೊರಟುಬಿಡುವಂತೆ ಮಾಡಿಯಾರೇನೋ ಎಂದು ಕಾಯುತ್ತಿದ್ದೆ. ವಾಟ್ಸ್‌ಆ್ಯಪ್, ಫೇಸ್‌ಬುಕ್ ಎಲ್ಲವನೂ ತಡಕಾಡಿದ್ದೆ. ಯಾವುದಾದರೂ ತೀವ್ರವಾದ ಅಳಿದುಳಿದ ಪ್ರೇಮ ನಿವೇದನೆಯ ನೋಡದೇ ಬಿಟ್ಟಿದ್ದೀನೇನೋ ಎಂದು. ಹಸೆಮಣೆಯಲ್ಲಿದ್ದಾಗಲೂ ಅವೆಲ್ಲ ಆನ್‌ಲೈನ್‌ನಲ್ಲೇ ಇದ್ದರೂ, ಯಾರ ಸುಳಿವೂ ಇರಲಿಲ್ಲ! ಕಡೆಗೆ ತಾಳಿ ಕಟ್ಟುವಾಗ, ನಮ್ಮ ಎಂಗೇಜ್‌ಮೆಂಟ್ ಆದ ಮೇಲಾದರೂ ಈ ಮುಖದ ಕಡೆ ಗಮನ ಕೊಡಬಹುದಿತ್ತೇನೋ ಎಂದು ಅವರ ಮುಖವನ್ನೇ ದಿಟ್ಟಿಸಿದೆ. ಆಗಲೂ ಅದೇ ನಿರ್ಲಿಪ್ತತೆಯಿತ್ತು. ನನ್ನ ನೋಡಲು ಬಂದಾಗ ಮತ್ತು ಎಂಗೇಜ್‌ಮೆಂಟ್‌ನಲ್ಲಿದ್ದಂತೆ. ನಂತರದ ಕ್ಷಣ ನನಗೇನೋ ಅನಿಸಿತ್ತು. ನಾ ಋತುಮತಿಯಾದ ಮೊದಲ ಕ್ಷಣ ಅನಿಸಿದ್ದು.

ಫಿಂಗರ್ ಚಿಪ್ಸ್ ತಿಂದು ಬಂದಿದ್ದರೋ ಇಲ್ಲ ಅತ್ತು ಬಂದಿದ್ದರೋ ಅವರ ಕಣ್ಣು ಕೆಂಪಗಾಗಿತ್ತು. ಮೊದಲ ಬಾರಿಗೆ ಅವರನ್ನ ಆ ರೀತಿ ನೋಡಿ, ಅಮ್ಮ ತೀರಿಕೊಂಡಾಗ ಅತ್ತಿದ್ದ ಅಣ್ಣನ ಕಣ್ಣೀರಿನ ನೆನಪಾಯಿತು. ನಾನು ಕಾರಿನ ಬಳಿಯೇ ಕಾಯುತ್ತಿದ್ದನ್ನು ನೋಡಿ, 'ಕಾಯಿಸಿದ್ದಕ್ಕೆ ಸಾರಿ, ಬಾ ಹೋಗೋಣ' ಎಂದು ಒಳ ಕೂತರು. ಅವರ ಮಾತನ್ನು ಎಂದೂ ಕೇಳಬೇಕೆನಿಸಿರಲಿಲ್ಲ. ಆದರೀಗ ಪಕ್ಕದಲ್ಲೇ ಎದ್ದು ಕಾಣುತಿದ್ದ ಅವರ ಕೆಂಪು ಕಂಗಳು, ಅವರ ಮಾತನ್ನು ಕೇಳುವಂತೆ ಪ್ರೇರೇಪಿಸುತ್ತಿತ್ತು. ಅವರ ನಿರ್ಮಲ ಮನಸ್ಸೂ ಮತ್ತು ಅವರ ಮೌನ ಸಮ್ಮಿಲನವಾದಂತಿತ್ತು. ಹೆಂಡತಿ ಸ್ಥಾನ ಮತ್ತು ಪ್ರೀತಿಯ ಹೊರತಾಗಿ ಬೇರೆಲ್ಲವನೂ ಪ್ರಾಮಾಣಿಕವಾಗಿ ಕೊಡುವ ಪ್ರಯತ್ನ ಮಾಡಿದ್ದರು. ಡಿವರ್ಸ್ ಎಂಬುದು ಪ್ರತೀ ದಿನ ಹಾಜರಾತಿ ಸಹಿ ಹಾಕಿದಷ್ಟು ಸುಲಭವಾಗಿ ನಡೆದಿತ್ತು. ನಾನೇನೂ ಜೀವನಾಂಶ ಕೇಳಿರಲಿಲ್ಲ. ನನ್ನ ಸ್ವಾಭಿಮಾನವ ಅರಿತವರೇ, ಅವರಾಫೀಸಿನಲ್ಲೇ ಕೆಲಸ ಕೊಟ್ಟು ಹೆಚ್ಚು ಸಂಬಳವನ್ನೂ ಕೊಟ್ಟಿದ್ದರು. ಎಷ್ಟೋ ಬಾರಿ 'ಯಾರನ್ನಾದರು ಮದುವೆಯಾಗು, ನಾನೇ ಬೇಕಾದರೆ ಹುಡುಗನ್ನ ನೋಡುತ್ತೇನೆ' ಎಂದವರು ಅಂದಾಗ ನಾನಿನ್ನೂ ಕನ್ಯೆಯೆಂಬುದು ನೆನಪಾಗುತ್ತಿತ್ತು. ಇಂದು ಇವರ ಸನಿಹದ ಪ್ರತಿ ಕ್ಷಣವೂ ಅದನ್ನೇ ಕೂಗಿ ಹೇಳಿದಂತನಿಸಿ, ಹೌದು ಮದುವೆ ಆಗಿಬಿಡಬೇಕಿತ್ತೇನೋ... ಅನಿಸುತ್ತಿದೆ.

ನಾನೇನೋ ಹೇಳಲೆಂದು ಅವರತ್ತ ತಿರುಗಿದೊಡನೆ,

'ಪ್ಲೀಸ್ ನಾಳೆಯಿಂದ ಆಫೀಸ್‌ಗೆ ಬರಲ್ಲ ಅಂತ ಹೇಳ್ಬೇಡ' ಎಲ್ಲವ ಅರಿತ ಆ ಮಾತು ಕೇಳಿ ಇತ್ತ ತಿರುಗಿ ಸುಮ್ಮನಾದೆ. ಅಷ್ಟರಲ್ಲಿ ನನ್ನ ಪೀಜಿಯ ಮುಂದೆ ಕಾರು ನಿಂತಿತ್ತು.



'ನೀನು ತುಂಬಾ ಒಳ್ಳೆ ಹುಡುಗಿ, ನಿನ್ನಂತ ಪ್ರಾಮಾಣಿಕಳನ್ನ ಪಡಿಯೋಕೆ ಅದೃಷ್ಟ ಇರಬೇಕು. ಥ್ಯಾಂಕ್ಸ್ ಫಾರ್ ಕಮಿಂಗ್. ಮತ್ಯಾವತ್ತೂ ಈ ವಿಷಯದಲ್ಲಿ ನಿನಗೆ ತೊಂದ್ರೆ ಕೊಡಲ್ಲ. ಟೇಕ್ ಕೇರ್, ಸಿಯು ಟುಮಾರೊ, ಬಾಯ್' ಹೊರಟಾಗ ಅದೇ ನಿರ್ಲಿಪ್ತತೆ.

ಅವರಿಗೂ ಬಾಯಿಲ್ಲ, ನನಗೂ ಕಾಲಿಲ್ಲ. ಮಾರನೆಯ ದಿನ ಎಂದಿನಂತೆ ಕೆಲಸಕ್ಕೆ ಹೊರಟೆ. ಅದೇ ಟೇಬಲ್‌ಗಳು, ಕಿಟಕಿಗಳೂ, ನಗು ಹೊತ್ತ ಮುಖಗಳು. ಕಿಟಕಿಯ ಗಾಜಿನಿಂದ ಝಳಪಿಸುತ್ತಿದ್ದ ಎಳೆ ಕಿರಣ ಬದುಕಿನ ಅದ್ಯಾವುದೋ ಉತ್ಸಾಹದ ಪ್ರತೀಕದಂತಿತ್ತು. ಎಲ್ಲವೂ ನಿರುಮ್ಮಳವಾಗಿಯೇ ಇತ್ತು ರೆಸ್ಟ್‌ರೂಮಿನಿಂದ ಬಂದು ಟೇಬಲ್ ಮೇಲಿನ ಪತ್ರವ ನೋಡುವವರೆಗೂ.

'ಸಖೀ ರಾಧಾ,

ಅಗಾಧ ಬದುಕಿನ ಪ್ರೀತಿ ಹೊತ್ತವಳು ನೀನು, ಆದರೆ ಸದಾ ಎಲ್ಲವನ್ನು ಕಳೆದುಕೊಂಡಂತೆ ಏಕೆ